# ಬಾಲಮುರಳೀಕೃಷ್ಣ ಹೇಳಿದ್ದು

ಹಸಿರು ಉಸಿರಾಡುವ ಕೈತೋಟದಲ್ಲಿ
ಎದೆಮಟ್ಟ ನಿಂತ ಎರಡು ಗಿಡ
ಒಂದು ಗಿಡದಿಂದ ಇನ್ನೊಂದಕ್ಕೆ ಸಮಾನಾಂತರವಾಗಿ
ತೆಳುವಾದೊಂದು ನೂಲು ಕಟ್ಟಿದ ಜೇಡ
ಒಂದೆರಡು ಕ್ಷಣ ಅದೇ ನೂಲಿನ ಜತೆ
ಜೋಕಾಲಿಯಾಡಿ ಕುಣಿಕುಣಿದು ಕೆಳಕ್ಕಿಳಿಯುತ್ತ ಮೇಲಕ್ಕೇರುತ್ತ
ಎಡಬದಿಯಿಂದ ಬಲಬದಿಗೆ ಬಲಬದಿಯಿಂದ ಎಡಬದಿಗೆ
ತೇಲುತ್ತ ಓಲುತ್ತ ಜೋಲುತ್ತ
ಬಲೆಯೊಂದನ್ನು ಹೆಣೆದು ಅವಿತಿಟ್ಟುಕೊಂಡಿತು.
ಆಮೇಲೆ ತುಸು ಗಾಳಿಯಾಡಿ ಇಬ್ಬನಿಯೂ ಬಿದ್ದು ಬಲೆಗೆ
ಬಲೆಯೇ
ಥಳಥಳಥಳ ಎಳೆಬಿಸಿಲಲ್ಲಿ

ಸ್ವರಗಳ ಸರದಾರನೂ ಹೀಗೆ ಒಂದು ಜೇಡವೇ
ಅವನು ಸ್ವರ ಸ್ವರವನ್ನೂ ತಡವಿ ಸವರಿ ಎಳೆದೆಳೆದು
ಹಿಗ್ಗಿಸಿ ಹಿಗ್ಗಿಸಿ ಹಿಂಜಿ ಹಿಂಜಿ
ಒಂದರೊಳಗಿನ್ನೊಂದು ಹೆಣೆದು ಹೆಣೆದು
ನೇಯುತ್ತಾನೆ ರಾಗದೊಂದು ಮಾಯಾಜಾಲ
ನಯವಾಗಿ
ನವುರಾಗಿ
ಮಧುರವಾಗಿ
ಕಿವಿಗೆ ಕಾಣಿಸುವಷ್ಟು ಸುಂದರವಾಗಿ

